ಶ್ರೀ ವಿ. ಎಲ್. ಪಾಟೀಲ್.—ತಹಶೀಲ್ದಾರ್‌ರವರಿಗೆ ಹೆಚ್ಚು ಕೊಡತಕ್ಕಂಥ ಅಧಿಕಾರ ಕೊಡಬೇಕೆಂದು ಹೇಳುವುದು ಈಗ ಇರತಕ್ಕ ವಿಚಾರದಲ್ಲಿ ಆಗುವುದಿಲ್ಲ. ಈಗ ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ಕೊಡಲಿಕ್ಕೆ ಸಾಧ್ಯವಿದೆ ಅಷ್ಟು ಕೊಡುತ್ತಾರೆ.

ಶ್ರೀ ಎಂ. ಎಸ್. ಪಾಟೀಲ್.—ಹಳ್ಳಿಗಾಡಿನ ಬಡ ಜನರು ಬಹಳ ತೊಂದರೆಯಲ್ಲಿರುರುತ್ತಾರೆ. ಆದ್ದರಿಂದ, ಅಸಿಸ್ಟೆಂಟ್ ಕಮಿಷನರ್ ಅವರು ಒಂದು ಸಾವಿರ ರೂಪಾಯಿವರೆಗೆ ಕೊಡುವಂತೆ ವ್ಯವಸ್ಥೆ ಮಾಡಿ.

ಶ್ರೀ ವಿ. ಎಲ್. ಪಾಟೀಲ್.—ಈಗ ಮಾನ್ಯ ಸದಸ್ಯರವರು ಏನು ಸೂಚನೆ ಮಾಡಿದ್ದೀರಿ, ಅದರ ಬಗ್ಗೆ ಒಮ್ಮೆಲೇ ಇಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ. ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮುನಿಯಪ್ಪ.—ಅಧ್ಯಕ್ಷರೆ, ಉಗಾದಿ ಹಬ್ಬದ ದಿವಸ ಚಿಕ್ಕಬಳ್ಳಾಪುರದಲ್ಲಿ ಮನೆಗಳ್ಳ ಸುಟ್ಟು ಹೋಗಿವೆ ಅಲ್ಲಿರತಕ್ಕ ಜಿಲ್ಲಾಧಿಕಾರಿಗಳನ್ನು ಕೇಳಿದರೆ ಒಂದು ರೂಪಾಯಿ ಇಲ್ಲ ಎಂದು ಹೇಳ್ತಾ ತ್ತಾರೆ. ಅವರ ಗತಿ ಏನಾಗಬೇಕು ಅದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕು.

(ಉತ್ತರ ಇಲ್ಲ.)

ಛೇರ್‌ಮನ್.—ಈಗ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರ ಗಮನ ಸೆಳೆಯುವ ಸೂಚನೆ.

(ಸದಸ್ಯರು ಗೈರು ಹಾಜರು)

Legislative Business

The Karnataka Municipal corporation and creation other Law (Amendment) Bill 1984.

Motion to consider

Mr. Chairman.—Now, further discussion on the Motion moved bs the Hon'ble Minister for Urban Development that the Karnataka Municipal Corporations and Certain other Laws (Amendment) Bill 1984 be taken into consideration.

ಶ್ರೀ ಎಂ. ಚಂದ್ರಶೇಕರ್ (ನಗರಾಭಿವೃದ್ಧಿ ಸಚಿವರು).—ಅಧ್ಯಕ್ಷರೆ, ಹಿಂದೆ ಇದರ ಬಗ್ಗೆ ಚರ್ಚೆ ಆದಾಗ ಕೆಲವು ಅಭಿಪ್ರಾಯಗಳ ಸೂಚನೆ ಆಯಿತು. ಆವತ್ತು ಇದನ್ನು ಮುಂದೂಡಿದ ಮೇಲೆ ನಮ್ಮ ಪಕ್ಷದ ಸದಸ್ಯರೊಂದಿಗೆ, ಮತ್ತು ವಿರೋಧಪಕ್ಷದ ನಾಯಕರೊಂದಿಗೆ ಚರ್ಚೆ ಆದಮೇಲೆ ಇವ್ಹೊತ್ತು ತಮ್ಮ ಮುಂದೆ ಇರುವಂತೆ ಕೆಲವೊಂದು ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇವೆ. ಆದ್ದರಿಂದ, ಇದನ್ನು ಒಪ್ಪಿ ಕೊಂಡರೆ ಇನ್ನು ಮುಂದಿನ ಚರ್ಚೆಯ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ, ಈ ಅಮೆಂಡ್‌ಮೆಂಟ್ ಗಳನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಚರ್ಚೆ ಆದಾಗ ಕ್ಲಾಸ್ ಮೂರರಲ್ಲಿ Amendment of Karnataka Act 10 of 1959, Village Panchayats and Local Boards Act—ಆದರ ಬಗ್ಗೆ ಹೇಳಿದರು, ಇದನ್ನು ಅದಕ್ಕೆ ಅನ್ವಯ ಮಾಡುವುದು ಬೇಡ. ಹಳ್ಳಿಗಾಡಿನಲ್ಲಿ ಅನೇಕ ಜನರಿಗೆ ತಿಳುವಳಿಕೆ ಇರುವುದಿಲ್ಲ, ಇಲ್ಲಿ ಏನು ಪೀನಲ್ ಕ್ಲಾಸ್ ಇದೆ ಅದು ಅವರಿಗೆ ಕಠೋರವಾಗುತ್ತದೆಂದು ಒಪ್ಪಿಕೊಂಡು, ಆದರಬಗ್ಗೆ ನಾನು ಒತ್ತಾಯ ಮಾಡುವುದಿಲ್ಲ, ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಇನ್ನು ಕ್ಲಾಸ್ ನಾಲ್ಕರಲ್ಲಿ Amendment of Karnataka Act 23 of 1964. ಅದರಲ್ಲಿ ಮುನಿಸಿಪಲ್ ಕೌನ್ಸಿಲ್ ಎಂದು ಇದೆ. ಅಂದಮೇರ ಟೌನ್ ಮುನಿಸಿಪಾಲಿಟಿ ಆಗಬಹುದು, ಸಿಟಿ ಮುನಿಸಿಪಾಲಿಟಿ ಆಗಬಹುದು, ಚರ್ಚೆ ಆದಮೇಲೆ ಟೌನ್ ಮುನಿಸಿಪಾಲಿಟಿ ಬೇಡ, ಸದ್ಯಕ್ಕೆ ಕಾರ್ಪೊರೇಷನ್, ಟಿ. ಬಿ. ಸಿ. ಐ. ಸಿಟಿ ಕಾರ್ಪೊರೇಷನ್ ಅಷ್ಟಕ್ಕೆ ಮಾತ್ರ ನೀಮಿತ ಆಗಬೇಕೆಂದು ವಿರೋಧಪಕ್ಷದ ನಾಯಕರು, ನಾವು, ಇತರ ಪಕ್ಷದ ನಾಯಕರು ಮಾಡಿದ ಚರ್ಚೆಯಲ್ಲಿ ಒಪ್ಪಿಕೊಳ್ಳಲಾಗಿದೆ. ಆದ್ದರಿಂದ, ಕ್ಲಾಸ್ ಮೂರು ಮತ್ತು ನಾಲ್ಕಕ್ಕೆ ತಂದಿರತಕ್ಕ ತಿದ್ದುಪಡಿಯನ್ನು ಸಭೆ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮಚಂದ್ರರಾವ್.—ಅಧ್ಯಕ್ಷರೆ, ಕಳೆದ ಸಾರಿ ಈ ಮಸೂದೆಯನ್ನು ಮಾನ್ಯ ಮಂತ್ರಿಗಳು ಮಂಡಿಸಿದಾಗ, ಈ ಮಸೂದೆಯಲ್ಲಿರತಕ್ಕ ಕೆಲವು ಕಲಂಗಳನ್ನು ನಾನು ತೀವ್ರವಾಗಿ ವಿರೋಧ ಮಾಡಿದ್ದೆ.

ಛೇರ್ಮನ್.—ತಾವು ಮೊದಲೇ ಮಾತನಾಡಿದ್ದೀರಿ.

ಶ್ರೀ ಪಿ. ರಾಮಚಂದ್ರರಾವ್.—ಹಿಂದೆ ಮಸೂದೆ ಬಂದಾಗ ಡಿಫರ್ ಮಾಡಲಾಗಿತ್ತು.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ, ಕಳೆದ ಸಾರಿ ಈ ಮಸೂದೆ ಬಂದಾಗ ಜಂಟಿ ಸಲಹಾ ಸಮಿತಿಗೆ ರೆಫರ್ ಮಾಡಿತ್ತು ಎಂದು ಕಾಣುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಜಂಟಿ ಸಲಹಾ ಸಮಿತಿಗೆ ಹೋಗಬೇಕೆಂದು ಆಗಿರಲಿಲ್ಲ. ಡಿಫರ್ ಆಗಿ ಪ್ರಸ್ತಾವನೆ ಆಯಿತು. ಈ ಎರಡು ಕ್ಲಾಸುಗಳ ಬಗ್ಗೆ ಮುಖ್ಯವಾಗಿ ಎಲ್ಲಾ ಪಕ್ಷಗಳ ನಾಯಕರುಗಳು ಕುಳಿತು ವಿಚಾರ ಮಾಡಿ ಮುಂದುವರಿಸೋಣ ಎಂದು ಹೇಳಿದ್ದೆವು.

ಶ್ರೀ ಎಂ. ಎಸ್. ಕೃಷ್ಣನ್.—ಡಿಸ್‌ಕಷನ್ ಕಂಪ್ಲೀಟ್ ಆಗಿಲ್ಲ.

ಛೇರ್ಮನ್.—With great respect to the Senior Member, I would say that you cannot have a second chance. While taking up clause by clause you can seek clarifications.

ಶ್ರೀ ಎಂ. ಎಸ್. ಕೃಷ್ಣನ್.—ಚರ್ಚೆ ಆಗುವುದನ್ನು ಮುಂದಕ್ಕೆ ಹಾಕಿದ್ದಾರೆ. ಆದ್ದರಿಂದ, ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಇದೆ. ಮಾನ್ಯ ರಾಮಚಂದ್ರರಾವ್ ಅವರು ಒಂದು ಸಾರಿ ಚರ್ಚೆಯಲ್ಲಿ ಭಾಗವಹಿಸಿದ್ದರೆ ಇನ್ನೊಂದುಸಾರಿ ಭಾಗವಹಿಸಕೂಡದು ಎಂದು ಏನೂ ಇಲ್ಲ. ಅವರು ಮತ್ತೆ ಏನಾದರೂ ಹೆಳುವುದು ಇದ್ದರೆ ಹೇಳಲಿಕ್ಕೆ ಅವಕಾಶ ಕೊಡಬೇಕು.

ಛೇರ್ಮನ್.—ಚರ್ಚೆಯಲ್ಲಿ ಭಾಗವಹಿಸದೇ ಇದ್ದವರು ಮಾತನಾಡುವುದು ಇದ್ದರೆ ಹೇಳಬಹುದು. ಮಾನ್ಯ ಕೃಷ್ಣನ್‌ರವರೆ ತಾವೂ ಸಹ ಮಾತನಾಡಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೂ ಎರಡು ವಿಚಾರಗಳನ್ನು ಹೇಳಬೇಕಾಗಿದೆ.

ಛೇರ್ಮನ್.—ಒಂದು ಸಾರಿ ಮಾತನಾಡಿದಮೇಲೆ ಬಿಲ್ ಮೇಲೆ ಪುನ: ಮಾತನಾಡಲಿಕ್ಕೆ ಅವಕಾಶ ಇಲ್ಲ ಹಾಗೇನಾದರೂ ಮಾತನಾಡುವುದು ಇದ್ದರೆ, ಅಮೆಂಡ್‌ಮೆಂಟ್ ಬಂದಾಗ ಮಾತನಾಡಬಹುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮೊನ್ನೆ ಮಾತನಾಡಿರುವುದು ಬೇರೆ ವಿಷಯಗಳ ಬಗ್ಗೆ. ಮತ್ತೆ ತಿದ್ದುಪಡಿಗಳನ್ನು ತಂದಾಗ ವಿಷಯಗಳಲ್ಲಿ ಬದಲಾವಣೆಗಳಾಗುತ್ತವೆ. ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಎಲ್ಲಾ ವಿಚಾರ ಪ್ರಸ್ತಾಪ ಮಾಡಿದಮೇಲೆ ಎರಡು ವಿಚಾರದಲ್ಲಿ ಚರ್ಚೆ ನಡೆಯಿತು. ಬಹಳಷ್ಟು ಜನ ಈ ಮನೆಯ ಸದಸ್ಯರು "ಕ್ಲಾಸ್ ಮೂರು" ಇರಬಾರದು ಎಂದು ಹೇಳಿದಮೇಲೆ ಆವೊತ್ತಿನ ಸಭೆಯಲ್ಲಿ ನಮ್ಮ ಕಡೆಯಿಂದ, ವಿರೋಧಪಕ್ಷದವರ ಕಡೆಯಿಂದ ಚರ್ಚೆ ಮಾಡಿ ಮುಂದೆ ಇದರ ಬಗ್ಗೆ ಅಮೆಂಡ್‌ಮೆಂಟ್ ತರುತ್ತೇವೆಂದು ಹೇಳಿದಮೇಲೆ, ಈ ಬಗ್ಗೆ ಕುಳಿತು ಮಾತನಾಡಿ ಈ ಎರಡರ ಬಗ್ಗೆ ಒಪ್ಪಂದಕ್ಕೆ ಬರಲಾಗಿದೆ. ಒಂದು "ಕ್ಲಾಸ್ ಥ್ರಿ" ಬಿಡುವುದು, ಹಾಗೆ ಕ್ಲಾಸ್ ನಾಲ್ಕಕ್ಕೆ ಚೇಂಜ್ ಆಗುವ ಹಾಗೆ ಮಾಡುವುದು

ಛೇರ್ಮನ್.—ಮಾನ್ಯ ಮಂತ್ರಿಗಳು ರಿಪ್ಲೈ ಕೊಟ್ಟಿದ್ದು ಆದಮೇಲೆ ಏನಾದರೂ ಅದರ ಬಗ್ಗೆ ಅನುಮಾನ ಇದ್ದರೆ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇವತ್ತು ಸದನದಮುಂದೆ ತಂದಿರತಕ್ಕ ಮಸೂದೆಯ ಬಗ್ಗೆ

1-30 p. m.

ಛೇರ್ಮನ್.—ಈಗಾಗಲೇ ತಾವು ಮಾತನಾಡಿದ್ದೀರಿ. ತಾವು ಕಳೆದ 9ನೇ ತಾರೀಖೇ ಮಾತನಾಡಿರುವುದರಿಂದ ಮತ್ತೊಮ್ಮೆ ತಮಗೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಆದಮೇಲೆ ಬೇಕಾದರೆ ತಾವು ವಿವರಣೆಗಳನ್ನು ಕೇಳಬಹುದು. ಈ ಮಸೂದೆಯಮೇಲೆ ಯಾರೂ ಮಾತನಾಡಿಲ್ಲ ಅನರಿಗೆ ಮಾತ್ರ ಮಾತನಾಡಲು ಅವಕಾಶವನ್ನು ಕೊಡಬಹುದು.

ಶ್ರೀ ಪಂಪಾಪತಿ.—ಸ್ವಾಮಿ, ಈ ಮಸೂದೆಯಲ್ಲಿ ಸೂಚಿಸಿರುವಂಥ ಶಿಕ್ಷೆ, ದಂಡ ಬಹಳ ಉಗ್ರವಾಗಿದೆ. ಈಗಿರತಕ್ಕ ಕಾನೂನನ್ನೇ ನಾವು ಅನುಸರಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಅಂಥಾದ್ದರಲ್ಲಿ ಇನ್ನೂ ಹೊಸ ಹೊಸ ಕಾನೂನುಗಳನ್ನು ತಂದರೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ.